StudentBounty.com

0104/0

**First Semester of Three Year LL.B./Fifth Semester of Five Year B.A.LL.B./B.B.A.LL.B. Examination, December 2013**

**FAMILY LAW – I**

**Hindu Law (Course – IV)**

Duration : 3 Hours Max. Marks : 100

**Instructions**: 1. Answer **all 5** Questions.

2. **One** essay type question **one** short note or problem from **each Unit** shall be attempted and the same is referred as Part **(a)** and Part **(b)** in all **Units**.

3. Figures to the **right** indicate marks.

4. Answer should be written **completely either** in English or Kannada.

**UNIT – I**

Q. No. 1. (a) Explain the ancient and modern sources of Hindu Law. Marks : 15

ಹಿಂದೂ ಕಾನೂನಿನ ಪ್ರಾಚೀನ ಮತ್ತು ಆಧುನಿಕ ಮೂಲಗಳನ್ನು ವಿವರಿಸಿ.

OR/**ಅಥವಾ**

Who are Hindus ? Persons to whom Hindu law does and does not apply ?

ಹಿಂದೂಗಳೆಂದರೆ ಯಾರು ? ಯಾವ ವ್ಯಕ್ತಿಗಳಿಗೆ ಹಿಂದೂ ಕಾನೂನು ಅನ್ವಯಿಸುವುದು ಮತ್ತು ಅನ್ವಯಿಸುವುದಿಲ್ಲ ?

(b) Distinguish between Mitakshara and Dayabhaga Schools of Hindu Law. Marks : 5

ಮಿತಾಕ್ಷರ ಮತ್ತು ದಾಯಭಾಗ ಪಂಥಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

OR/**ಅಥವಾ**

Write a note on 'Dharmashastra'.

'ಧರ್ಮಶಾಸ್ತ್ರ' ದ ಬಗ್ಗೆ ಟಿಪ್ಪಣಿ ಬರೆಯಿರಿ.

**P.T.O.**

www.StudentBounty.com

StudentBounty.com

## UNIT – II

Q. No. 2. (a) What are the grounds on which a petition for divorce can be filed by a wife ? Marks : 15

ಯಾವ ಯಾವ ಕಾರಣಗಳ ಆಧಾರದ ಮೇಲೆ ವಿವಾಹ ವಿಚ್ಛೇದನಕ್ಕಾಗಿ ಹೆಂಡತಿಯು ಮನವಿ ಸಲ್ಲಿಸಬಹುದು ?

OR/**ಅಥವಾ**

Discuss the important changes brought by the Hindu Marriage Act, 1955 and Marriage Laws (Amendment) Act, 1976 to the Hindu law.

ಹಿಂದೂ ವಿವಾಹ ಅಧಿನಿಯಮ, 1955 ಹಾಗೂ ವಿವಾಹ ಕಾನೂನುಗಳ (ತಿದ್ದುಪಡಿ) ಅಧಿನಿಯಮ, 1976 ಹಿಂದೂ ಕಾನೂನಿಗೆ ತಂದಿರುವ ಮುಖ್ಯವಾದ ಬದಲಾವಣೆಗಳ ಬಗ್ಗೆ ಚರ್ಚಿಸಿ.

(b) What is desertion ? What facts are required to establish desertion ? Marks : 5

ಅಭಿತ್ಯಜನೆ ಎಂದರೇನು ? ಅಭಿತ್ಯಜನೆಯೊಂದು ಘಟಿತವಾಗಬೇಕಾದರೆ ಯಾವ ಯಾವ ಸಂಗತಿಗಳು ಇರತಕ್ಕದ್ದು ?

OR/**ಅಥವಾ**

Husband got a decree of divorce against the wife on the ground of adultery. Is the wife entitled for permanent alimony and maintenance ?

ಜಾರತ್ವ ಕಾರಣದ ಮೇರೆಗೆ ಗಂಡನು ಹೆಂಡತಿಯ ವಿರುದ್ಧ ವಿವಾಹ ವಿಚ್ಛೇದನವನ್ನು ನ್ಯಾಯಾಲಯದಿಂದ ಡಿಕ್ರಿಯಲ್ಲಿ ಪಡೆದನು. ಶಾಶ್ವತ ಜೀವನಾಂಶ ಹಾಗೂ ಪೋಷಣ ನಿಧಿಯನ್ನು ಹೆಂಡತಿಯು ಪಡೆಯಬಹುದೇ ?

## UNIT – III

Q. No. 3. (a) Explain the incidents of Hindu Joint Family properties and separate properties of the members of the Joint Family. What are the rights of coparceners ? Marks : 15

ಹಿಂದೂ ಅವಿಭಕ್ತ ಕುಟುಂಬದ ಆಸ್ತಿ ಮತ್ತು ಸ್ವಯಾರ್ಜಿತ ಆಸ್ತಿಯ ಪ್ರಸಂಗಗಳನ್ನು ವಿವರಿಸಿ. ದಾಯಾದಿಗಳಿಗಿರುವ ಹಕ್ಕುಗಳು ಯಾವುವು ?

OR/**ಅಥವಾ**

www.StudentBounty.com

StudentBounty.com

Explain the doctrine of 'Pious obligation' ? State the son's and daughter's liability for the debt contracted before and after partition.

'ಪವಿತ್ರ ಕರ್ತವ್ಯ' ದ ಸಿದ್ಧಾಂತವನ್ನು ವಿವರಿಸಿ. ಸ್ವತ್ತು ವಿಭಜನೆ ಮಾಡುವ ಮೊದಲು ಮತ್ತು ನಂತರ ಮಾಡಿದ ಋಣಗಳಿಗೆ ಮಗನ ಮತ್ತು ಮಗಳ ಹೊಣೆಗಾರಿಕೆಯ ಬಗ್ಗೆ ತಿಳಿಸಿ.

(b) Distinguish between partition and family arrangement. Marks : 5

ವಿಭಜನೆಗೂ ಮತ್ತು ಕುಟುಂಬ ವ್ಯವಸ್ಥೆಗೂ ಇರುವ ವ್ಯತ್ಯಾಸವನ್ನು ತಿಳಿಸಿ.

OR/**ಅಥವಾ**

Write a note on Devolution of Office of Mahant. When it comes to an end ?

ಮಠಾಧಿಪತ್ಯದ ಹಸ್ತಾಂತರಣೆಯ ಬಗ್ಗೆ ಒಂದು ಟಿಪ್ಪಣಿ ಬರೆಯಿರಿ. ಇದು ಯಾವಾಗ ಮುಕ್ತಾಯಗೊಳ್ಳುತ್ತದೆ ?

## UNIT – IV

Q. No. 4. (a) Explain the general rules of succession of Hindu female dying intestate under the Hindu Succession Act, 1956. Marks : 15

ಹಿಂದೂ ವಾರಸು ಅಧಿನಿಯಮ, 1956 ರಲ್ಲಿ ಮೃತ್ಯು ಪತ್ರ ಮಾಡದೆ ಗತಿಸಿದ ಹಿಂದೂ ಮಹಿಳೆಯ ವಾರಸು ಹಕ್ಕಿನ ಸಾಮಾನ್ಯ ನಿಯಮಗಳನ್ನು ವಿವರಿಸಿ.

OR/**ಅಥವಾ**

What are the significant changes introduced in the Hindu Succession Act, 1956 by Hindu Succession (Amendment) Act, 2005 ?

ಹಿಂದೂ ವಾರಸು ಅಧಿನಿಯಮ, 1956 ಕ್ಕೆ ಹಿಂದೂ ವಾರಸು (ತಿದ್ದುಪಡಿ) ಅಧಿನಿಯಮ, 2005 ರಲ್ಲಿ ಮಾಡಿದ ಮಹತ್ತರ ಬದಲಾವಣೆಗಳಾವುವು ?

(b) A Hindu male owns self-acquired property. He dies intestate leaving behind his mother, father, son and an illegitimate daughter. Assign the shares. Marks : 5

ಒಬ್ಬ ಹಿಂದೂ ಪುರುಷ ಸ್ವಯಾರ್ಜಿತ ಸ್ವತ್ತನ್ನು ಹೊಂದಿರುತ್ತಾನೆ. ಅವನು ಯಾವುದೇ ಮೃತ್ಯು ಪತ್ರ ಮಾಡದೆ ತನ್ನ ತಾಯಿ, ತಂದೆ, ಮಗ ಮತ್ತು ಅಧರ್ಮಜ ಮಗಳನ್ನು ಬಿಟ್ಟು ಸಾಯುತ್ತಾನೆ. ಸ್ವತ್ತನ್ನು ವಿಭಜಿಸಿ.

OR/**ಅಥವಾ**

www.StudentBounty.com

StudentBounty.com



A coparcener disposed of his interest in the undivided coparcenary property by way of will. State the validity of this will.

ಒಬ್ಬ ದಾಯಾದಿಯು ತನ್ನ ಅವಿಭಾಜಿತ ಹಿತಾಸಕ್ತಿಯ ದಾಯಾದಿ ಸ್ವತ್ತನ್ನು ಮೃತ್ಯು ಪತ್ರದ ಮುಖಾಂತರ ಪರಭಾರೆ ಮಾಡುತ್ತಾನೆ. ಈ ಮೃತ್ಯು ಪತ್ರದ ಸಿಂಧುತ್ವವನ್ನು ತಿಳಿಸಿ.

**UNIT – V**

Q. No. 5. (a) When a Hindu wife is entitled to maintenance and separate residence under Hindu Adoptions and Maintenance Act, 1956 ? Explain it by citing cases. Marks : 15

ಹಿಂದೂ ದತ್ತಕ ಮತ್ತು ಜೀವನಾಂಶ ಅಧಿನಿಯಮ 1956 ರ ಅನ್ವಯ ಯಾವಾಗ ಹಿಂದೂ ಪತ್ನಿಯು ಜೀವನಾಂಶ ಹಾಗೂ ಪ್ರತ್ಯೇಕ ವಸತಿಗೆ ಅರ್ಹಳಾಗಿದ್ದಾಳೆ ? ಪ್ರಕರಣಗಳೊಂದಿಗೆ ವಿವರಿಸಿ.

OR/**ಅಥವಾ**

What is an adoption ? Explain the effect of adoption on the natural family and the adoptive family.

ದತ್ತಕ ಎಂದರೇನು ? ನೈಸರ್ಗಿಕ ಕುಟುಂಬ ಮತ್ತು ದತ್ತಕ ಕುಟುಂಬಗಳ ಮೇಲೆ ದತ್ತಕದ ಪರಿಣಾಮಗಳನ್ನು ವಿವರಿಸಿ.

(b) 'A' a widow, sues her father and father-in-law for maintenance separately. Is she entitled for maintenance. Marks : 5

'A' ಎಂಬ ಒಬ್ಬಳು ವಿಧವೆ ತನ್ನ ತಂದೆ ಮತ್ತು ಮಾವನ ವಿರುದ್ಧ ಜೀವನಾಂಶಕ್ಕಾಗಿ ಪ್ರತ್ಯೇಕವಾದ ದಾವೆಯನ್ನು ಹೂಡುತ್ತಾಳೆ. ಅವಳು ಜೀವನಾಂಶಕ್ಕೆ ಅರ್ಹಳೆ ?

OR/**ಅಥವಾ**

Whether the guardian can alienate the properties of minor ? Discuss.

ಅಲ್ಪವಯಿಗಳ ಆಸ್ತಿಗಳನ್ನು ಸಂರಕ್ಷಕರು ಪರಭಾರೆ ಮಾಡಬಹುದೇ ? ಚರ್ಚಿಸಿರಿ.

---

www.StudentBounty.com